

ಮೆಕ್ಸಿಕೊದ ನಗರವೊಂದರ ಬೀದಿಯಲ್ಲಿ ಬೀದಿಹೆಣವಾದ ದೇಹವೊಂದನ್ನು ಪರಿಶೀಲಿಸುತ್ತಿರುವ ಪೊಲೀಸರು

ಸಿಗುವ ಲಾಭಕ್ಕೆ ತಕ್ಕಂತೆ ಎರಡೂ ಗುಂಪುಗಳಿಗೆ ಮುಸುಕಿನಲ್ಲಿ ನೆರವಾಗುತ್ತಿದ್ದಾರೆ. ಈ ಅಪರಾಧ ಗುಂಪುಗಳು ಸೃಷ್ಟಿಸಿರುವ ಭೀತಿಯಿಂದಾಗಿ ಮೆಕ್ಸಿಕೊದಲ್ಲಿ ಪೊಲೀಸ್ ಕೆಲಸಕ್ಕೆ ಸೇರಲೂ ಜನರು ಮುಂದೆ ಬರುತ್ತಿಲ್ಲ.

ಈ ಮೊದಲು ಅಮೆರಿಕ ಗಡಿಯ ಕಾಡುಗಳಲ್ಲಿ ಸಾಮೂಹಿಕ ಸಮಾಧಿಗಳು ಪತ್ತೆಯಾಗುತ್ತಿದ್ದವು. ಆಪ್ತರನ್ನು ಕಳೆದುಕೊಂಡವರ ಹುಡುಕಾಟ ಹೆಚ್ಚಾದಾಗ ಅಪರಾಧ ಕೂಟಗಳು ತಮ್ಮ ಕಾರ್ಯಾಚರಣೆಯನ್ನು ಖಾಸಗಿ ಕಟ್ಟಡಗಳಿಗೆ ವರ್ಗಾಯಿಸಿದವು.

ಜನಸಂಚಾರ ಕಡಿಮೆ ಇರುವ ಸ್ಥಳಗಳಲ್ಲಿರುವ ಮನೆಗಳನ್ನು ಗುರುತಿಸಿ, ಯಾವ್ಯಾವುದೋ ನೆಪ ಹೇಳಿ ಮನೆಗಳನ್ನು ಬಾಡಿಗೆಗೆ ತೆಗೆದುಕೊಳ್ಳುತ್ತಾರೆ. ವಿರೋಧಿ ಗುಂಪುಗಳಿಗೆ ಸೇರಿರಬಹುದು ಎಂಬ ಶಂಕೆ ಬಂದವರನ್ನು ಅಪಹರಿಸಿ, ಇಂಥ ಮನೆಗಳಿಗೆ ತಂದಿಟ್ಟು ಚಿತ್ರಹಿಂಸೆ ಕೊಡುತ್ತಾರೆ. ಅಲ್ಲಿಯೇ ಕೊಂದು, ಮನೆಯಂಗಳದಲ್ಲಿ ಹೂತು, ಕಾಂಕ್ರೀಟ್ ಸಾರಿಸುವ ತಂತ್ರ ಅನುಸರಿಸುತ್ತಿದ್ದಾರೆ.

ಅಪರಾಧಿಗಳು ಖಾಸಗಿ ಆಸ್ತಿಗಳಲ್ಲಿ ಶವಗಳನ್ನು ಸಂಸ್ಕಾರ ಮಾಡಿದಾಗ ಅಂಥ ಶವಗಳನ್ನು ಪತ್ತೆಹಚ್ಚಲು ಹಲವು ಕಾನೂನು ತೊಡಕುಗಳೂ ಸೃಷ್ಟಿಯಾಗುತ್ತವೆ. ಖಾಸಗಿ ಪ್ರವೇಶಕ್ಕೆ ವಾರಂಟ್ ಬೇಕಾಗುತ್ತೆ. ಅದನ್ನು ಪಡೆದುಕೊಳ್ಳಲು ಸಾಕಷ್ಟು ತಾಪತ್ರಯಳಿವೆ. ಇಷ್ಟೆಲ್ಲಾ ಆದ ಮೇಲೆ ಮನೆಯೊಳಗೆ ಪ್ರವೇಶಿಸಿದರೂ, ಮಣ್ಣಿನ ನೆಲದಲ್ಲಿ ಹೂತ ಹೆಣ ಹುಡುಕುವುದಕ್ಕೂ, ಕಾಂಕ್ರೀಟ್ ಅಥವಾ ಟೈಲ್ಸ್ ಹಾಸಿದ ನೆಲದಡಿ ಇರಬಹುದಾದ ಹೆಣಗಳನ್ನು ಹೊರಗೆ ತೆಗೆಯುವುದಕ್ಕೂ ಬಹಳ ವ್ಯತ್ಯಾಸವಿದೆ. ಶ್ರಮವೂ ಸಾಕಷ್ಟು ಬೇಕಾಗುತ್ತದೆ.

ಇಷ್ಟೆಲ್ಲಾ ಕಷ್ಟಪಟ್ಟು ಸಮಾಧಿಗಳನ್ನು ಪತ್ತೆ ಹಚ್ಚಿದರೆ ಅದರಲ್ಲಿರುವ ಶವಗಳು ಬಹುತೇಕ ಕೊಳೆತು ಹೋಗಿರುತ್ತವೆ. ಕೆಲವೊಮ್ಮೆ ಗುಂಡಿನೇಟಿಗೆ ಛಿದ್ರವಾದ ತಲೆಬುರುಡೆಗಳ ಅಸ್ಥಿಪಂಜರಗಳು ಮಾತ್ರವೇ ಉಳಿದಿರುತ್ತವೆ. ಅವುಗಳ ಗುರುತನ್ನು ಪತ್ತೆ ಮಾಡುವುದಾದರೂ ಹೇಗೆ? ಪ್ರತಿದಿನ ಹೀಗೆ ಶವಗಳು ಪತ್ತೆಯಾಗುತ್ತಿದ್ದರೆ ವಿಧಿವಿಜ್ಞಾನ ತಜ್ಞರು ಎಷ್ಟು ಜನರ ಡಿಎನ್‌ಎ ಶೋಧಿಸಲು ಸಾಧ್ಯ?

ಪೊಲೀಸರು ಮತ್ತು ರಾಜಕಾರಣಿಗಳಂತೂ 'ಹೀಗೆ ಹೆಣವಾದವರೆಲ್ಲಾ ಅಪರಾಧಿಗಳು' ಎಂದು ತಿಪ್ಪೆ ಸಾರಿಸುತ್ತಿದ್ದಾರೆ.

'ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡಿ ನನ್ನನ್ನು ಸಾಕುತ್ತಿದ್ದ ಮಗ ಯಾವ ಕಾನೂನು ಉಲ್ಲಂಘಿಸಿ ಅಪರಾಧಿಯಾದ ಹೇಳಿ' ಎಂದು 2011ರಲ್ಲಿ ನಾಪತ್ತೆಯಾದ ಮಗನನ್ನು ಹುಡುಕುತ್ತಿರುವ ರಾಯಿ ಜೋಸ್ ಜೂರಿನ್ ಅರೋನಾ ಕೇಳುವ ಪ್ರಶ್ನೆಗೆ ಉತ್ತರ ನೀಡುವ ಧೈರ್ಯ ಯಾರಿಗೂ ಇಲ್ಲ. 'ಸತ್ತವರಲ್ಲಿ ಅಪರಾಧಿಗಳಿಗಿಂತ ಅಮಾಯಕರೇ ಹೆಚ್ಚು' ಎನ್ನುವುದು ಮೆಕ್ಸಿಕೊದಲ್ಲಿ ಎಲ್ಲರಿಗೂ ಗೊತ್ತಿರುವ ಬಹಿರಂಗ ಸತ್ಯ.

ಸಾಮೂಹಿಕ ಸಮಾಧಿಗಳು ಪತ್ತೆಯಾದ ನಂತರ ಹೆದರಿರುವ ಗ್ವಾಡಲ್‌ಜರಾ ನಗರದ ಎಸ್ಟೆನ್ಸಿಯಾ ಪ್ರದೇಶದ ಜನರು ತಮ್ಮ ಮನೆಗಳ ಬಾಗಿಲುಗಳಿಗೂ ಇಟ್ಟಿಗೆ ಇಟ್ಟು ಗೋಡೆ ಕಟ್ಟಿ ಗ್ರಾಮೀಣ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ತಮ್ಮ ಸ್ವಂತ ಮನೆಗಳಲ್ಲಿ ವಾಸಿಸಲು ಅವರಿಗೆ ಧೈರ್ಯ ಸಾಲುತ್ತಿಲ್ಲ.

ಮಾಫಿಯಾಗಳ ಹಿಡಿತಕ್ಕೆ ದೇಶವೊಂದು ಸಿಲುಕಿದರೆ ಪರಿಸ್ಥಿತಿ ಏನಾಗುತ್ತೆ ಎನ್ನುವುದಕ್ಕೆ ಮೆಕ್ಸಿಕೊ ನಮ್ಮ ತಲೆಮಾರಿಗೆ ಜೀವಂತ ಎಚ್ಚರಿಕೆ.

## ಒಂದು ವರ್ಷದಲ್ಲಿ ಕೊಲೆಯಾದವರು 30 ಸಾವಿರ ಮಂದಿ

ಡ್ರಗ್ಸ್ ಮಾಫಿಯಾ ಮೇಲೆ ಯುದ್ಧ ಸಾರಿದ ನಂತರ (2006) ಒಟ್ಟು 62 ಸಾವಿರ ಮಂದಿ ನಾಪತ್ತೆಯಾಗಿದ್ದಾರೆ ಎಂದು ಮೆಕ್ಸಿಕೊ ಸರ್ಕಾರ ಜ.6ರಂದು ಅಧಿಕೃತವಾಗಿ ಒಪ್ಪಿಕೊಂಡಿತ್ತು. ಈ ಹಿಂದೆ ಈ ಸಂಖ್ಯೆ 40,000 ಇರಬಹುದು ಎಂದು ಅಂದಾಜಿಸಲಾಗಿತ್ತು.

ಡಿಸೆಂಬರ್ 2018ರಲ್ಲಿ ಮೆಕ್ಸಿಕೊ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದ ಮಾನ್ಯುಯಲ್ ಲೊಪೆಜ್ ಆಬ್ರಾಡೊರ್ ಅವರಿಗೆ ನಾಪತ್ತೆ ಸಮಸ್ಯೆಯೊಂದಿಗೆ ವ್ಯಾಪಕವಾಗಿ ಹೆಚ್ಚಾಗುತ್ತಿರುವ ಕೊಲೆಗಳ ಪ್ರಮಾಣವೂ ದೊಡ್ಡ ಸವಾಲಾಗಿದೆ. ಕೇವಲ ಒಂದು ವರ್ಷದಲ್ಲಿ (2019) ಒಟ್ಟು 31 ಸಾವಿರ ಮಂದಿ ಕೊಲೆಯಾಗಿದ್ದಾರೆ.

ಮೆಕ್ಸಿಕೊದ ಡ್ರಗ್ಸ್ ಮಾಫಿಯಾ ದೊರೆ ಜಾಕ್ವಿನ್ ಎಲ್ ಚಾಪೊ ಗುಜ್‌ಮನ್‌ನ ಮಗ ಒವಿಡೊ ಗುಜ್‌ಮನ್‌ನನ್ನು ಕ್ಯುಲಿಯಾಕನ್ ನಗರದಲ್ಲಿ ಕಳೆದ ಅಕ್ಟೋಬರ್‌ನಲ್ಲಿ ಪೊಲೀಸರು ಬಂಧಿಸಿದ್ದರು. ಆದರೆ ನೂರಾರು ಮಂದಿ ಬಂದೂಕು ಹಿಡಿದು ರಸ್ತೆಯಲ್ಲಿ ರಳಾಯಿಸಿ, ವಾಹನಗಳಿಗೆ ಬೆಂಕಿ ಹಚ್ಚಿ ಜನರಲ್ಲಿ ಭೀತಿಹುಟ್ಟಿಸಿದ ನಂತರ ಪೊಲೀಸರು ಅಸಹಾಯಕರಾಗಿ ಒವಿಡೊನನ್ನು ಬಂಧಮುಕ್ತಗೊಳಿಸಿದರು.

'ಸಮಾಜದಲ್ಲಿ ಬದಲಾವಣೆ ತರುವ ಮೂಲಕ ಪರಿಸ್ಥಿತಿ ನಿಯಂತ್ರಿಸುವೆ, ಬಂದೂಕು ಬದಿಗಿಟ್ಟು ತಬ್ಬಿಕೊಳ್ಳುವೆ' ಎಂದು ಜನರಲ್ಲಿ ಭರವಸೆ ಬಿತ್ತಿದ್ದ ಆಬ್ರಾಡೊರ್ ಅವರ ಮುಂದಿನ ನಡೆಯನ್ನು ಮೆಕ್ಸಿಕೊ ಜನರು ಕುತೂಹಲದಿಂದ ನಿರೀಕ್ಷಿಸುತ್ತಿದ್ದಾರೆ.

ಭದ್ರತಾ ಪಡೆಗಳನ್ನು ಮಣಿಸಬಲ್ಲಷ್ಟು ಶಸ್ತ್ರಬಲ, ತೋಳ್ಬಲ, ರಾಜಕಾರಣಿಗಳನ್ನು ಕೊಳ್ಳುವಷ್ಟು ಹಣಬಲ ಇರುವ ಮಾಫಿಯಾ ದೊರೆಗಳನ್ನು ಆಬ್ರಾಡೊರ್ ನಿಯಂತ್ರಿಸಬಲ್ಲರೆ?